# ಪಾಠ 12

# ಯೇಸುಸ್ವಾಮಿಯವರೊಂದಿಗೆ ಐಕ್ಯಮತ

## ಮೂಲ : ಬ್ರೂಸ್ ಎನ್ ಕ್ಯಾಮರಾನ್,     ಅನುವಾದ : ಪಾಸ್ಟರ್ ಚೆಲುವರಾಜು

**ಪೀಠಿಕೆ:** – ಕಳೆದ ಕೆಲವು ವಾರಗಳಿಂದ ನಾವೇನು ಕಲಿತೆವು ಎಂಬುದನ್ನು ಪುನರಾವಲೋಕನ ಮಾಡೋಣ. ಯೇಸುಸ್ವಾಮಿ ಎರಡನೇ ಆದಾಮನಾಗಿ ಬಂದರು. ಆದಾಮ ಸೋತ ಸ್ಥಳದಲ್ಲಿ ಯೇಸುಸ್ವಾಮಿ ಜಯಶಾಲಿಯಾದರು. ಯಾವ ರೀತಿಯಾಗಿ ನಾವು ಆದಾಮನಿಂದ ಪಾಪದಲ್ಲಿ ಮುಳುಗಿದೆವೋ, ಅದೇ ರೀತಿಯಾಗಿ ಯೇಸುಸ್ವಾಮಿಯವರನ್ನು ಆರಿಸಿಕೊಂಡಾಗಿ, ಅವರ ಮುಖಾಂತರ ನೀತಿಯಲ್ಲಿ ಮುಳುಗಿದೆವು. ನಾವು ದೀಕ್ಷಾಸ್ನಾನ ತೆಗೆದುಕೊಂಡಾಗ, ನಾವು ಯೇಸುಸ್ವಾಮಿಯವರ ದೀಕ್ಷಾಸ್ನಾನ, ಪಾಪರಹಿತ ಜೀವನ, ಮರಣ ಮತ್ತು ಪುನರುತ್ಥಾನದಲ್ಲಿ ಭಾಗಿಯಾದೆವು. ಇಲ್ಲಿಯ ತನಕ ನಾವು ಜೊತೆಯಾಗಿ ಇದನ್ನೆಲ್ಲಾ ಕಲಿತೆವು ತಾನೇ? ಕಳೆದ ವಾರದಿಂದ ಇಲ್ಲಿಂದ ಮುಂದೇನು ಎಂಬುದನ್ನು ಕಲಿಯುತ್ತಿದ್ದೇವೆ: ಮಾನವ ಸ್ವಭಾವದ ಜೀವನವನ್ನು ಬಿಟ್ಟು ಆತ್ಮನ ಸ್ವಭಾವದಲ್ಲಿ ನಡೆದುಕೊಳ್ಳೋಣ. ದೈನಂದಿನ ಜೀವನದಲ್ಲಿ ಯೇಸುಸ್ವಾಮಿಯವರೊಂದಿಗೆ ಐಕ್ಯಮತದಿಂದರುವುದು ಎಂದರೆ ಏನು ಎಂಬುದನ್ನು ಶೋಧಿಸಿನೋಡೋಣ. ಇಂಥಹ ಶೋಧಕ್ಕೆ ಸಿದ್ಧರಾಗಿದ್ದೀರಾ? ಆಳವಾದ ಸತ್ಯವೇದ ಅಧ್ಯಾಯನದಿಂದ ಹೆಚ್ಚಿನ ಜ್ಞಾನ ಪಡೆಯೋಣ.

## I. ನೂತನ ಜೀವನ

(ಅ) **ರೋಮ 6:3–4ನ್ನು ಓದಿಕೊಳ್ಳೋಣ.** ನಾವು ಏನನ್ನು ನೂತನವಾಗಿ ಪಡೆದುಕೊಳ್ಳತ್ತೇವೆಂದು ಪೌಲನು ಇಲ್ಲಿ ಹೇಳುತ್ತಿದ್ದಾನೆ. (ಉತ್ತರ : ನೂತನ ಜೀವನ).

(1) ಹೊಸ ವಸ್ತುಗಳನ್ನು ನೀವು ಇಷ್ಟ ಪಡುವಿರಾ? ನನ್ನ ಸ್ನೇಹಿತನೊಬ್ಬ, ''ನನ್ನ ಆಟದ ವಸ್ತುಗಳು ಹೊಸದಾಗಿರುವುದನ್ನು ನಾನು ತುಂಬಾ ಇಷ್ಟ ಪಡುತ್ತೇನೆ.'' ಎನ್ನುತ್ತಿದ್ದ. ನಾನು ಜೀವನವನ್ನು ಹಾಗೆ ನೋಡುವುದಿಲ್ಲ. ನನಗೆ ಜೀವನವೆಂದರೆ : ''ತೆರೆದ ಪುಸ್ತಕ'' ''ಹೊಳೆಯುವ ಕಿರಣ''; ''ಶುದ್ಧ ಚಿನ್ನ'' ಉಪಯೋಗಿಸಿದ ವಸ್ತುಗಳಿಗೆ ''ಎರಡನೇ ಸ್ಥಾನ''. ಉಪಯೋಗಿಸದ ವಸ್ತು ಹೊಸದು; ಅದರ ಮಾಲಿಕತ್ವ ಸಂತೋಷ ನೀಡುತ್ತದೆ.

(2)ಉಪಯೋಗಿಸಿದ ಆಟಿಕೆಗಳನ್ನು ಸಮಸ್ಯೆಗಳೇನು? [ಮತ್ತೊಬ್ಬರ ಸಮಸ್ಯೆಗಳನ್ನು ನಿಮ್ಮ ಕೊರಳಿಗೆ ಬಿಗಿದುಕೊಳ್ಳುತ್ತೀರಿ.]

(3)ನೀವು ಇದನ್ನು ಓದುತ್ತಾ ಇದ್ದಾರೆ. ನಿಮಗೆ ''ಉಪಯೋಗಿಸಲ್ಪಟ್ಟಾ ಜೀವನ''ದ ಪರಿಚಯವಾಗುತ್ತಿರಬಹುದು. [ನಿಮ್ಮ ಜೀವನ ಅಪ್ಪಟ ಚಿನ್ನದಂತಿರಲು ಸಾಧ್ಯವಿಲ್ಲದಿರಬಹುದು.] ಯೇಸುಸ್ವಾಮಿ ಕೊಡುತ್ತೇನೆ ಎನ್ನುವ ''ಹೊಸ ಜೀವನ''ದ ಆಕರ್ಷಣೆ ಏನು? [ನೀವು ವಿಷಾದ ಪಡುತ್ತಿರುವ ವಿಷಯಗಳು, ನೀವೇ ಸೃಷ್ಟಿಸಿಕೊಂಡ ಸಮಸ್ಯೆಗಳು ನಿಮ್ಮ ಹಳೆಯ ಜೀವನದ ಭಾಗವಾಗಿದೆ.]

(i) ಹಳೆಯ ಜೀವನ ಶೈಲಿಯನ್ನು ಬಿಟ್ಟುಕೊಡುವುದು ಸಾಧ್ಯವೇ? ನಿಜವಾಗಿಯೂ ಅದು ಹಳೆಯ ಜೀವನವನ್ನೆಲ್ಲಾ ಅಳಿಸಿಹಾಕುವುದೇ? ಅಥವಾ ನಾವು ಈಗ ಮಾತನಾಡುತ್ತಿರುವ ವಿಷಯ – ಹುರುಳಿಲ್ಲದ ಮಾತು ಎನಿಸುತ್ತಿದೆಯೇ?

(ಆ) **ರೋಮ 6:5–7ನ್ನು ಓದಿಕೊಳ್ಳಿ.** ಪೌಲನು ಯಾವ ರೀತಿಯಾಗಿ ನಮ್ಮ ನೂತನ ಜೀವನವನ್ನು ಇದು ಸಂಪೂರ್ಣವಾಗಿ ಅಳಿಸಿಹಾಕುತ್ತದೆಯೇ? [ಸತ್ಯವೇದವು. ''ನಮ್ಮ ಪಾಪಾಧೀನಸ್ವಭಾವವು ನಾಶವಾಗಿ ನಾವು ಇನ್ನೂ ಪಾಪದ ವಶದಲ್ಲಿರದಂತೆ ನಮ್ಮ ಪೂರ್ವಸ್ವಭಾವವು ಕ್ರಿಸ್ತನ ಕೂಡ ಶಿಲುಬೆಗೆ ಹಾಕಲ್ಪಟ್ಟಿತೆಂದು ತಿಳಿದಿದ್ದೇವೆ'' ಎಂದು ಹೇಳುತ್ತದೆ. ಹಳೆಯ ಪಾಪದ ನೆನಪಿರಬಹದು, ಆದರೆ ಅದರ ಆಳ್ವಿಕೆ ಇನ್ನಿಲ್ಲ.]

(1) ನಮ್ಮ ಹಿಂದಿನ ಪಾಪಗಳನ್ನು ಸಂಪೂರ್ಣವಾಗಿ ಮರೆಯುವುದು ಒಳ್ಳೆಯದೇ? [ಕೆಲವರಿಗೆ ಹಿಂದಿನ ಪಾಪವೆಂಬ ಕೂಪದಲ್ಲಿ ಬೆಂದು–ಬೆಂಡಾಗಿ ಬಂದರೆ ಮುಂದಿನ ಒಳ್ಳೆಯ ನಡವಳಿಕೆಗೆ ಅದು ನಾಂದಿಯಾಗುತ್ತದೆ ಎಂದನಿಸುವುದುಂಟು].

(ಇ) **ರೋಮ 6:8–11ನ್ನು ಓದಿಕೊಳ್ಳಿ.** ನಮ್ಮ ನೂತನ ಜೀವನ ಯಾವಾಗ ಪ್ರಾರಂಭವಾಗುತ್ತದೆ? ಭವಿಷ್ಯದಲ್ಲಿಯೇ? ಈಗಲೇ? [''ಎಣಿಸಿಕೊಳ್ಳಿರಿ'' ಎಂಬ ಈ ವಾಕ್ಯದಲ್ಲಿ ಬರುವ ಪದ ನೂತನ ಜೀವನವನ್ನು ಈಗಲೇ ಅನ್ವಯಿಸಿಕೊಳ್ಳಿ ಎಂಬರ್ಥದಲ್ಲಿದೆ. ಇಂಥಹ ಜೀವನವನ್ನು ನಾವು ಈಗ ಸಹ ಅನುಭವಿಸಬಹುದಾಗಿದೆ.]

## II. ನೂತನ ಜೀವನ ಸಾಗಿಸುವಿಕೆ

(ಅ) **ರೋಮ 6:12–13ನ್ನು ಓದಿಕೊಳ್ಳಿ.** ನಾವು ನೂತನರಾದಾಗ, ಯೇಸುಸ್ವಾಮಿಯವರನ್ನು ಆತುಕೊಂಡು ನೂತನ ಜೀವನವನ್ನು ಸಾಗಿಸುತ್ತಿರುವಾಗಲೂ ಪಾಪ ನಮ್ಮನ್ನು ಆಳುತ್ತದೆಯೇ? [ಸತ್ಯವೇದ, ''ಸಾಯತಕ್ಕ ನಿಮ್ಮ ದೇಹದ ಮೇಲೆ ಪಾಪಕ್ಕೆ ಅಧೀನರಾಗಿ ನೀವು ದೇಹದ ದುರಾಶೆಗಳಿಗೆ ಒಳಪಡಬೇಡಿರಿ.'' ಎನ್ನುತ್ತದೆ.]

(1) ನಿಮ್ಮನ್ನು ಪಾಪಕ್ಕೆ ಅದೀನರನ್ನಾಗಿ ಮಾಡದೆ, ದೇವರಿಗೆ ''ಒಪ್ಪಿಸಿಕೊಟ್ಟು'' ನಿಮ್ಮ ಅಂಗಗಳನ್ನು ನೀತಿಕೃತ್ಯ ನಡಿಸುವ ಅಂಗಗಳನ್ನಾಗಿ ಆತನಿಗೆ ಸಮರ್ಪಿಸಿರಿ ಎಂಬುದರ ಅರ್ಥವೇನು? [ಮೊದಲನೇಯದಾಗಿ, ಪ್ರಜ್ಞಾಪೂರ್ವಕವಾದ ತೀರ್ಮಾನ ತೆಗೆದುಕೊಳ್ಳಬೇಕು. ನಂತರ ಯಾವಾಗಲೂ ಅಂಥಹ ತೀರ್ಮಾನ ಮಾಡುತ್ತಿರಲೇಬೇಕು. ದುಷ್ಟತ್ವ ನಡಿಸುವ ಸ್ಥಳದಲ್ಲಿ ನೀತಿಸಾಧನೆ ಮಾಡುವ ತೀರ್ಮಾನಗಳನ್ನು ತೆಗೆದುಕೊಳ್ಳಬೇಕು. ಎರಡನೇಯದಾಗಿ, ''ಒಪ್ಪಿಸಿಕೊಟ್ಟು'' ಎಂದರೆ ಮನಃಪೂರ್ವಕವಾಗಿ ಹಾಗೆ ನಡೆದುಕೊಳ್ಳಲು ಸಿದ್ಧರಾಗಿರಬೇಕು. ಮೊದಲನೇಯದಾಗಿ ನಾವು ನೀತಿಯ ಜೀವನ ಸಾಗಿಸಲು ತೀರ್ಮಾನ ಮಾಡೋಣ, ನಮ್ಮನ್ನು ಹೇಗೆ ಉಪಯೋಗಿಸಿಕೊಳ್ಳಬೇಕೆಂದು ದೇವರು ತೀರ್ಮಾನ ಮಾಡಲಿ.]

(ಆ) **ರೋಮ 6:14ನ್ನು ಓದಿಕೊಳ್ಳಿ.** ನೀವು ದೇವರ ಕಡೆಗೆ ತಿರಿಗಿಕೊಳ್ಳುವ ತೀರ್ಮಾನ ನೋವಿನಿಂದ ಕೂಡಿರುವಾಗ, ನೀವು ''ದೇವರೇ ನೀನೇ ತೀರ್ಮಾನ ತೆಗೆದುಕೊಳ್ಳಲು ಸಹಾಯಮಾಡಪ್ಪಾ'' ಎಂದು ಪ್ರಾರ್ಥಿಸುತ್ತೀರಾ ಎಂದಿಟ್ಟುಕೊಳ್ಳೋಣ. ಈ ವಾಕ್ಯ ಆ ಬಗ್ಗೆ ಹೇಳುವುದೇನು? [ನಾವು ಸತತವಾಗಿ ತೀರ್ಮಾನ ಮಾಡುತ್ತಲೇ ಇರಬೇಕೆಂದು ಈ ವಾಕ್ಯ ಸೂಚಿಸುತ್ತದೆ. ನೀವು ಸ್ವಾರ್ಥವನ್ನೇ ತೀರ್ಮಾನ ಮಾಡಿದರೂ ಸಹ, ಅದರ ಒಡೆಯ ನೀವಲ್ಲ; ಪಾಪವೇ ಅದರ ಒಡೆಯ.]

(1) ನೀವು ಪಾಪದ ವ್ಯಸನಿ (addict) ಆಗಿದ್ದು ಯಾವಾಗ ಎಂದು ನಿಮಗೆ ಜ್ಞಾಪಕವಿದೆಯೇ? (''ಹೌದು'' ಎಂದು ನೀವು ಉತ್ತರಿಸಿದರೆ, ಅದರ ಸಕಾರಣ ತೀರ್ಮಾನವೇನೆಂದರೆ: ನೀತಿಯನ್ನು ಆರಿಸಿಕೊಳ್ಳುವವರಿಗೆ ಹೆಚ್ಚಿನ ಆಯ್ಕೆಗಳಿರುತ್ತವೆ.]

(ಇ) **ರೋಮ 6:14** ಬಹುಮುಖ್ಯವಾದ ಸಂಗತಿಯೊಂದನ್ನು ತಿಳಿಸುತ್ತದೆ. ಅದೇನೆಂದರೆ : ಪಾಪವು ನಿಮ್ಮ ಮೇಲೆ ಅಧಿಕಾರ ನಡೆಸದು; ನೀವು ಧರ್ಮಶಾಸ್ತ್ರಕ್ಕೆ ಅಧೀನರಲ್ಲ, ಕೃಪೆಗೆ ಅಧೀನರಾಗಿದ್ದೀರಷ್ಟೆ. ಇದನ್ನು ಹೀಗೆ ಅರ್ಥಮಾಡಿಕೊಳ್ಳಬಹುದೇ? – ರಸ್ತೆಯ ಅಪಘಾತದ ಬಗ್ಗೆ ಚಿಂತೆಮಾಡಬೇಕಾಗಿಲ್ಲ ಅಥವಾ ರಸ್ತೆಯ ಅಪಘಾತದಲ್ಲಿ ಬೇರೊಬ್ಬರಿಗಾದ ನೋವಿನ ಬಗ್ಗೆ ಕಾಳಜಿವಹಿಸಬೇಕಾಗಿಲ್ಲ ಏಕೆಂದರೆ ಈಗ ರಸ್ತೆಯಲ್ಲಿ ಅನುಸರಿಸಬೇಕಾದ ನಿಯಮಗಳನ್ನೆಲ್ಲಾ ರದ್ದುಗೊಳಿಸಲಾಗಿದೆ. ಇನ್ನು ಮುಂದೆ ವೇಗದ ಮಿತಿಗಳಿರುವುದಿಲ್ಲ. ನಿಲುಗಡೆಯ ನಾಮಫಲಕಗಳಿರುವುದಿಲ್ಲ. ರಸ್ತೆಯ ನಿಲುಗಡೆ ಸೂಚಕ ಕೆಂಪು-ಹಳದಿ ದೀಪಗಳಿರುವುದಿಲ್ಲ. ರಸ್ತೆಯ ಯಾಬ ಬದಿಯಲ್ಲಿ ಚಲಿಸಬೇಕೆಂಬುದು ನಿಮಗೆ ಬಿಟ್ಟದ್ದು. ಈ ಮಾತುಗಳು ಅರ್ಥಪೂರ್ಣ

ಅನ್ನಿಸುತ್ತದೆಯೇ? [''ಧರ್ಮಶಾಸ್ತ್ರಕ್ಕೆ ಅಧೀನರಲ್ಲ'' ಎಂಬುದು ಕೆಲವೊಂದು ಸಂಗತಿಗಳನ್ನು ನಮಗೆ ತಿಳಿಸುತ್ತವೆ. ಮೊದಲನೇಯದಾಗಿ, ''ಧರ್ಮಶಾಸ್ತ್ರದ ಖಂಡನೆಗೆ ಒಳಪಟ್ಟಿಲ್ಲ''. ಎರಡನೇಯದಾಗಿ ಧರ್ಮಶಾಸ್ತ್ರವನ್ನು ಕೈಗೊಳ್ಳುವ ಮುಖಾಂತರ ರಕ್ಷಣೆಯ ಹುಡುಕಾಟ ಮಾಡಬೇಕಾಗಿಲ್ಲ. ಕೃಪೆಯೇ ನಮ್ಮ ರಕ್ಷಣೆಯ ಹೊಸ ದಾರಿ.]

(1) **ಮತ್ತಾಯ 5:17-19ನ್ನು ಓದಿಕೊಳ್ಳಿ**. ಯೇಸುಸ್ವಾಮಿಯವರು ಧರ್ಮಶಾಸ್ತ್ರ ಹಾಗೂ ಅವರ ಪಾತ್ರವನ್ನು ಕುರಿತು ಏನು ಹೇಳುತ್ತಿದ್ದಾರೆ. [ನಾನೇನಾದರೂ ನೀವು ಹತ್ತು ಆಜ್ಞೆಗಳಲ್ಲಿ ನೀವು ಒಂದನ್ನು ಉಲ್ಲಂಘಿಸಬಹುದೆಂದು ಹೇಳಿದರೆ, ನೀವು ವಾಕ್ಯವನ್ನು ಗಮನವಿಟ್ಟು ಓದಲಿಲ್ಲ ಎನಿಸುತ್ತದೆ.]

(2)**ಗಲಾತ್ಯ 3:10-11ನ್ನು ಓದಿಕೊಳ್ಳಿ**. ಇಲ್ಲಿ ಪೌಲನು, ನಾವು ಧರ್ಮಶಾಸ್ತ್ರಕ್ಕೆ ಅಧೀನರಲ್ಲ ಎಂದು ಯಾವ ಅರ್ಥದಲ್ಲಿ ಹೇಳುತ್ತಿದ್ದಾನೆ? [ದೇವರ ಸನ್ನಿಧಾನದಲ್ಲಿ ನೀತಿವಂತರಾಗಿರಲು ನಾವು ಧರ್ಮಶಾಸ್ತ್ರವನ್ನು ಆತುಕೊಂಡಿಲ್ಲ.]

(ಈ) **ಎಫೆಸ 4:2-24ನ್ನು ಓದಿಕೊಳ್ಳಿ**. ನಿಮ್ಮ ಆಂತರ್ಯದಲ್ಲಿ ನೀವು ಹೊಸಬರಾಗಿ ನೂತನ ಸ್ವಭಾವವನ್ನು ಧರಿಸಿಕೊಳ್ಳುವದು ಯಾವುದು? [ಒಂದು ಹೊಸ ಮನೋವೃತ್ತಿ]

(1) ಸಬ್ಬತ್ ಶಾಲೆಯ ಪೂರಕವಾದ ಈ ನನ್ನ ಪಾಠಗಳನ್ನು ಬಹಳ ವರ್ಷಗಳಿಂದ ಓದಿಕೊಂಡು ಬರುತ್ತಿರುವವರಿಗೆ ನನ್ನ ''ಮನೋವೃತ್ತಿ ದತ್ತ ನೀತಿ''ಯ ಬಗ್ಗೆ ತಿಳಿದಿರಬಹುದು. ಈ ಹೊಸ ಮನೋವೃತ್ತಿಯ ಬಗ್ಗೆ ನಿಮ್ಮ ಅಭಿಪ್ರಾಯವೇನು? [ನೀವು ದೇವರನ್ನು ಪ್ರೀತಿಸುತ್ತೀರಿ. ದೇವರಿಗೆ ಕೃತಜ್ಞತರಾಗಿದ್ದೀರಿ. ಆತನನ್ನು ಮೆಚ್ಚಿಸಲು ಇಷ್ಟಪಡುತ್ತೀರಿ. ನಿಮಗೆ ಏನು ಮೆಚ್ಚಿಗೆಯಾಗುತ್ತದೆಯೋ, ಅದನ್ನು ಬಿಟ್ಟುಕೊಡಲು ನಿಮ್ಮಿಂದ ಸಾಧ್ಯವಾಗುವುದಿಲ್ಲ ಎಂದು ನಾನು ನನ್ನ ಅನುಭವದಿಂದ ತಿಳಿದಿದ್ದೇನೆ. ನಿಮಗೆ ಏನು ಮೆಚ್ಚಿಗೆಯಾಗುತ್ತದೆಯೋ ಮತ್ತು ದೇವರಿಗೆ ಏನು ಮೆಚ್ಚಿಗೆಯಾಗುತ್ತದೆಯೋ ಆ ವಿಷಯದಲ್ಲಿ ಪ್ರಾಮಾಣಿಕರಾಗಿರುವುದು ಬಲುಕಷ್ಟ. ಆದರೆ ದೇವರಾತ್ಮನಿಂದ ಬಲಗೊಂಡವರಾಗಿ ಈ ಮನೋವೃತ್ತಿಯನ್ನು ಬೆಳೆಯಿಸಿಕೊಳ್ಳಲು ನೀವು ಪ್ರಯತ್ನಿಸುವಿರಾದರೆ, ನೀವು ಸರಿಯಾದ ದಾರಿಯಲ್ಲೇ ನಡೆಯುತ್ತಿರುತ್ತೀರಿ.

(ಉ) **ರೋಮ 6:15-18ನ್ನು ಓದಿಕೊಳ್ಳಿ**. ನಾವು ಕೃಪೆಯ ಅಧೀನದಲ್ಲಿರುವ್ಯದರಿಂದ, ಧರ್ಮಶಾಸ್ತ್ರ ನಮಗೆ ಅನ್ವಯಿಸುವುದಿಲ್ಲ ಎನ್ನುವ ಕ್ರಿಶ್ಚಿಯನ್ನರ ಬಗ್ಗೆ ಇದು ಏನು ಹೇಳುತ್ತದೆ. [ಕೃಪೆಯ ಅಧೀನದಲ್ಲಿರುವವರಿಗೂ, ಪಾಪ ಆಯ್ಕೆ ಮಾಡಿಕೊಳ್ಳುವಂಥ ವಿಷಯವಲ್ಲವೆಂದು ಇದು ಸ್ಪಷ್ಟವಾಗಿ ಹೇಳುತ್ತದೆ.

ಪಾಪವನ್ನು ಯಾಕೆ ಆರಿಸಿಕೊಳ್ಳಬಾರದೆಂಬುದಕ್ಕೆ ಸೂಕ್ತ ಕಾರಣವೆಂದರೆ: ನಾವು ಅದರ ಗುಲಾಮರಾಗಿಬಿಡುತ್ತೇವೆ. ಪಾಪಕ್ಕೆ ಅಂಟಿಕೊಂಡೇ ಇರುವವರಿಗೆ (ಬಹುಶಃ ನಮಗೆ) ಈ ವಾಕ್ಯ ಏನು ಹೇಳುತ್ತಿದೆ ಎಂಬುದು ನಿಖರವಾಗಿ ಅರ್ಥವಾಗುವುದರಲ್ಲಿ ಸಂದೇಹವೇ ಇಲ್ಲ.]

(ಊ) **ರೋಮ 6:19ನ್ನು ಓದಿಕೊಳ್ಳಿ.** ಈ ವಚನದಲ್ಲಿ ನಿಮಗೆ ದೊರೆಯುವ ಪ್ರೋತ್ಸಾಹವೇನು? [ಪೌಲನು ನಾವು ಬಲಹೀನರು ಎಂಬುದನ್ನು ಒಪ್ಪಿಕೊಳ್ಳುತ್ತಾನೆ. ನಾನು ಮಾತ್ರ ಬಲಹೀನನಲ್ಲ. ಇತರರೂ ನನಗಿಂತಲೂ ಬಲಹೀನರೆಂಬುದನ್ನು ಕಂಡು ನನಗೆ ಬಹಳ ಖುಷಿಯಾಗುತ್ತಿದೆ.)

(1) ಪೌಲನು ಮಾನವರ ಬಲಹೀನತೆಯ ವಿಷಯದಲ್ಲಿ ನೀಡುವ ಸಲಹೆ ಏನು? ''ನರಭಾವದ ಬಲಹೀನತೆಯ ದಸೆಯಿಂದಲ್ಲ'', ಆದರೆ ನಮ್ಮ ಬಲವನ್ನು ಮಿರಿದ, ಪರಿಶುದ್ಧಾತ್ಮನ ಬಲದಿಂದ ಪಾಪದ ವಿರುದ್ಧ ಬಲಪಡುವ ವಿಷಯ ಕುರಿತು ಮಾತನಾಡಿದ್ದಾನೆ.

(ಋ) **ರೋಮ 6:20-21ನ್ನು ಓದಿಕೊಳ್ಳಿ.** ನೀವು ಪಾಪದ ವ್ಯಸನಿ ಆಗಿದ್ದು ಯಾವಾಗ ಮತ್ತು ಅದರ ಫಲಿತಾಂಶವೇನು? ಎಂಬ ಪ್ರಶ್ನೆಗೆ ಪ್ರಾಮಾಣಿಕ ಉತ್ತರ ಕೊಡುತ್ತೀರಾ? ಇದೆಲ್ಲಾ ಹೇಗಾಯಿತು? [ಪಾಪಕ್ಕೆ ತನ್ನದೆ ಆದ ಆಕರ್ಷಣೆಯಿದೆ ಎಂಬುದರಲ್ಲಿ ಯಾವ ಸಂದೇಹವೂ ಇಲ್ಲ. ಆದರೆ ಅದರ ಫಲಿತಾಂಶ ಒಂದು ರೈಲುಗಾಡಿಯ ಅಪಘಾತವಿದ್ದಂತೆ. ಒಂದು ಸಮಯ ನಿಮ್ಮ ಪಾಪ ಅಂಥಹ ಅಪಘಾತಕ್ಕೆ ಅವಕಾಶಮಾಡಿಕೊಡಲಿಲ್ಲವೆನಿಸಿದರೇ ದೇವರು ನಿಮ್ಮ ಮೇಲೆ ತೋರಿಸಿ ಕರುಣೆಯ ಸಂಬಂಧ ಆತನಿಗೆ ವಂದನೆ ಹೇಳಿರಿ. ಸೈತಾನನ್ನು ಮುಂದುವರಿಯಲು ಅವಕಾಶ ಕೊಟ್ಟಾರೆ ಏನಾಗುತ್ತಿತ್ತು ಎಂಬುದನ್ನು ಕುರಿತು ಚಿಂತನೆಮಾಡಿ ನೋಡಿ.]

(1) ಪಾಪದ ಫಲಿತಾಂಶವನ್ನು ಕುರಿತು ಆಲೋಚಿಸುವಂತೆ ಪೌಲ ಅಲ್ಲಿ ಇಲ್ಲಿ ಹೇಳುರುವುದೇನೋ ನಿಜ, ಆದರೆ ಅದರ ಅಂತ್ಯ ಫಲಿತಾಂಶ ನಿತ್ಯಮರಣವೇ.

(i) ಪರಿಸ್ಥಿತಿ ಹೀಗಿರುವಾಗ, ಪಾಪಮಾಡಲು ಆಯ್ಕೆಮಾಡಲು ಸಾಹಸಮಾಡುವ ನಾವು ಅದೇಷ್ಟು ಕಿವುಡರಿರಬೇಕು?

(ಎ) **ರೋಮ 6:22ನ್ನು ಓದಿಕೊಳ್ಳಿ.** ಯೇಸುಸ್ವಾಮಿಯೊಂದಿಗೆ ಐಕ್ಯಮತ ದಿಂದಿರುವುದು ನಮ್ಮನ್ನು ಎಲ್ಲಿಗೆ ಕೊಂಡೊಯ್ಯುತ್ತದೆ? [ಪರಿಶುದ್ಧ ಜೀವನ ಮತ್ತು ನಿತ್ಯ ಜೀವದೆಡೆಗೆ.]

(1) ವಾಕ್ಯವು, ''ಪರಿಶುದ್ಧ''ರಾಗುವ ವಿಷಯದಲ್ಲಿ ಮಾತನಾಡುತ್ತಿರುವುದೇನೋ ಸರಿ, ಆದರೆ ಒಮ್ಮೊಮ್ಮೆ ನಾವು ನಮ್ಮ ಹಳೆಯ ಅಭ್ಯಾಸಗಳನ್ನು ಅನುಸರಿಸಿ ಜಾರಿ

ಬೀಳುತ್ತೇವೆ. ಈ ಬಗ್ಗೆ ವಾಕ್ಯ ಹೇಳುವುದೇನು? [ನಾವೊಂದು ದಾರಿಯಲ್ಲಿ ನಡೆಯುತ್ತಾ ಹೊರಟಿದ್ದೇವೆ. ಆ ದಾರಿ ಸರಿಯಾದ ಮನೋವೃತ್ತಿಗಳಿಂದ ಕೂಡಿದ್ದು, ಪರಿಶುದ್ಧಾತ್ಮನ ಸಹಾಯವನ್ನು ಕೋರಿ, ಯೇಸುಸ್ವಾಮಿಯೊಂದಿಗೆ ಐಕ್ಯಮತದಿಂದ ಇರುವುದಾದರೆ, ನಾವು ಪರಿಶುದ್ಧತ್ವವನ್ನು ಸಮೀಪಿಸುತ್ತಿದ್ದೇವೆ ಎಂದು ಅರ್ಥಮಾಡಿಕೊಳ್ಳಬಹುದು. ಈ ದಾರಿಯಲ್ಲಿ ನಾವು ಮೂರು ಹೆಜ್ಜೆ ಮುಂದೆ ಹಾಕಿ, ಒಂದು ಹೆಜ್ಜೆ ಹಿಂದೆ ಇಟ್ಟರೂ, ನಾವು ಪರಿಶುದ್ಧದೆಡೆಗೆ ನಡೆಯುತ್ತಲೇ ಇರುತ್ತೇವೆ.]

(ಏ) **ರೋಮ 6:23ನ್ನು ಓದಿಕೊಳ್ಳಿ**. ನಮ್ಮ ಬಲದಿಂದ ನಾವು ಸಾಧಿಸುವುದು ಎಷ್ಟು ಮತ್ತು ಸಾಧಿಸಲಾಗದಿರುವುದು ಎಷ್ಟು? [ನಾವು ಸಾಧಿಸುವುದು ಸಾವು ಮಾತ್ರ. ಆದರೆ ನಿತ್ಯ ಜೀವ ನಿಜಕ್ಕೂ ಒಳ್ಳೆಯ ವರವಾಗಿದೆ.]

(ಐ) ನನ್ನ ಸ್ನೇಹಿತನೇ ನೀನು ನೂತನ ಜೀವನ ಜೀವಿಸುತ್ತಿದ್ದೀಯಾ? ದೇವರನ್ನು ಮೆಚ್ಚಿಸುವ ಮನೋವೃತ್ತಿಗಳು ನಿನಗಿವೆಯೇ? ಆತ್ಮನು ನಡೆಸುವ ಜೀವನ ಜೀವಿಸಲು ಇಚ್ಛಿಸುವಿರಾ? ಪಾಪ ವ್ಯಸನಿಗೆ ಕಾರಣೀಭೂತವಾದ – ದುಷ್ಟಾಲೋಚನೆಗಳನ್ನು ದೂರಮಾಡುವಿರಾ? ಈಗಿಂದಿಗಲೇ ದೇವರಲ್ಲಿ ನಿಮ್ಮ ಪಾಪಗಳನ್ನು ಒಪ್ಪಿಕೊಳ್ಳುವಿರಾ? ನೂತನ ಜೀವನ ಸಾಗಿಸಲು ಆತನಲ್ಲಿ ಸಹಾಯ ಬೇಡುವಿರಾ?

(III) **ಮುಂದಿನ ವಾರ : ದೋಷಪರಿಹಾರ ಮತ್ತು ಜಾಗತಿಕ ಸಾಮರಸ್ಯ**